Test Booklet No.
परीक्षा पुस्तिका संख्या

This Booklet contains **20** printed pages.
इस पुस्तिका में **20** मुद्रित पृष्ठ हैं ।

# MAK-23-I

**PAPER I / प्रश्न-पत्र I**
**PART IV & V / भाग IV & V**
**Kannada Language Supplement**
**कन्नड़ भाषा परिशिष्ट**

Test Booklet Code
परीक्षा पुस्तिका कोड

**C**

**Do not open this Test Booklet until you are asked to do so.**
**इस परीक्षा पुस्तिका को तब तक न खोलें जब तक कहा न जाए ।**
**Read carefully the Instructions on the Back Cover (Page 19 & 20) of this Test Booklet.**
**इस परीक्षा पुस्तिका के पिछले आवरण (पृष्ठ 19 व 20) पर दिए गए निर्देशों को ध्यान से पढ़ें ।**

**For instructions in Kannada see Page 2 of this booklet. / कन्नड़ में निर्देशों के लिए इस पुस्तिका का पृष्ठ 2 देखें ।**

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Blue/Black Ball Point Pen only** for writing particulars on this page/marking responses in the Answer Sheet.
5. The CODE for this Language Booklet is **C**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V consisting of **60** Objective Type Questions, and each carries 1 mark :
   Part IV : Language I – (Kannada) *(Q. Nos. 91 – 120)*
   Part V : Language II – (Kannada) *(Q. Nos. 121 – 150)*
7. Part IV contains 30 questions for Language I and Part V contains 30 questions for Language II. In this Test Booklet, only questions pertaining to Kannada language have been given. **In case the language(s) you have opted for as Language I and/or Language II is a language other than Kannada, please ask for a Supplement (Language) Test Booklet of C Code that contains questions on that language. The languages being answered must tally with the languages opted for in your Application Form. No change in languages is allowed.**
8. **Candidates are required to attempt questions in Language II (Part V) in a language other than the one chosen as Language I (Part IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

## *परीक्षार्थियों के लिए निर्देश*

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल नीले/काले बॉल पॉइंट पेन** का प्रयोग करें ।
5. इस भाषा पुस्तिका का **कोड C** है । यह सुनिश्चित कर लें कि इस भाषा परिशिष्ट पुस्तिका का कोड, उत्तर पत्र के **पृष्ठ-2** एवं मुख्य प्रश्न पुस्तिका पर छपे कोड से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, तथा प्रत्येक 1 अंक का है :
   भाग IV : भाषा I – (कन्नड़) *(प्रश्न सं. 91 – 120)*
   भाग V : भाषा II – (कन्नड़) *(प्रश्न सं. 121 – 150)*
7. भाग IV में भाषा I के लिए 30 प्रश्न और भाग V में भाषा II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से सम्बन्धित प्रश्न दिए गए हैं । **यदि भाषा I और/या भाषा II में आपके द्वारा चुनी गई भाषा(एँ) कन्नड़ के अलावा है/हैं, तो कृपया C कोड वाली उस भाषा वाली परिशिष्ट (भाषा) परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए । भाषाओं का परिवर्तन अनुमन्य नहीं है ।**
8. **परीक्षार्थी भाषा II (भाग V) के लिए, भाषा सूची से ऐसी भाषा चुनें जो उनके द्वारा भाषा I (भाग IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

Name of the Candidate (in Capital Letters) : ______________________
परीक्षार्थी का नाम (बड़े अक्षरों में) :
Roll Number (अनुक्रमांक) : in figures (अंकों में) ______________________
: in words (शब्दों में) ______________________
Centre of Examination (in Capital Letters) : ______________________
परीक्षा केन्द्र (बड़े अक्षरों में) :
Candidate's Signature : ______________ Invigilator's Signature : ______________
परीक्षार्थी के हस्ताक्षर : निरीक्षक के हस्ताक्षर :
Facsimile signature stamp of Centre Superintendent ______________________

ಈ ಪ್ರಶ್ನೆ ಪುಸ್ತಿಕೆಯಲ್ಲಿ **20** ಪುಟಗಳು ಮುದ್ರಿತವಾಗಿದೆ.

**ಪ್ರಶ್ನೆ ಪುಸ್ತಿಕೆ ಕೋಡ್**

**C**

# MAK-23-I

## ಪ್ರಶ್ನೆ ಪತ್ರಿಕೆ I
## ಭಾಗ IV & V
## ಕನ್ನಡ ಭಾಷಾ ಪೂರಕ

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

***ಪರೀಕ್ಷಾರ್ಥಿಗಳಿಗೆ ಸೂಚನೆಗಳು :***

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಕೋಡ್ **C** ಆಗಿದೆ. ಉತ್ತರ ಪತ್ರಿಕೆಯ **ಪುಟ-2** ರಲ್ಲಿ ಮುದ್ರಣವಾಗಿರುವ ಕೋಡ್‌ದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳು ಇವೆ IV ಮತ್ತು V, ಇದರಲ್ಲಿ 60 ವಸ್ತುನಿಷ್ಟ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :
   ಭಾಗ IV : ಭಾಷೆ I — (ಕನ್ನಡ) *(ಪ್ರಶ್ನೆ 91 ರಿಂದ 120)*
   ಭಾಗ V : ಭಾಷೆ II — (ಕನ್ನಡ) *(ಪ್ರಶ್ನೆ 121 ರಿಂದ 150)*
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆಮಾಡಿದ ಭಾಷೆಗಳು – ಕನ್ನಡ ಅಲ್ಲದೇ ಬೇರೆ ಇದ್ದರೆ, ದಯವಿಟ್ಟು C ಕೋಡ್ ಭಾಷೆಯ ಸಪ್‌ಲಿಮೆಂಟ್ (ಭಾಷೆ)** (Supplement) **ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು. ಭಾಷೆಗಳಲ್ಲಿ ಯಾವುದೇ ಬದಲಾವಣೆಯನ್ನು ಅನುಮತಿಸಲಾಗುವುದಿಲ್ಲ.**
8. ಪರೀಕ್ಷಾರ್ಥಿ ಭಾಷೆ II (ಭಾಗ V) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ / ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ OMR ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ____________________

ಕ್ರಮಸಂಖ್ಯೆ : ಅಂಕೆಗಳಲ್ಲಿ ____________________

: ಅಕ್ಷರಗಳಲ್ಲಿ ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ____________________

ಪರೀಕ್ಷಾರ್ಥಿಯ ಸಹಿ ____________________ ನಿರೀಕ್ಷಕರ ಸಹಿ ____________________

Facsimile signature stamp of
Centre Superintendent ____________________

ಅಭ್ಯರ್ಥಿಗಳು **ಕನ್ನಡವನ್ನು ಭಾಷೆ I** ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

# ಭಾಗ IV
# ಭಾಷೆ I
# ಕನ್ನಡ

***ನಿರ್ದೇಶನಗಳು :*** *ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರ.ಸಂ. 91 ರಿಂದ 99 ರವರೆಗೆ) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.*

ಕವಿ, ಶಿವಭಕ್ತೆ, ಗಡಿಭಾಗದಲ್ಲಿ ಹೋರಾಟಗಾರ್ತಿ ಎಂದು ಖ್ಯಾತಿ ಪಡೆದ ಜಯದೇವಿ ತಾಯಿ ಲಿಗಾಡೆ ಅವರು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. ಸೊಲ್ಲಾಪುರ ಗಡಿಭಾಗದಲ್ಲಿ ಕನ್ನಡದ ಏಳ್ಗೆಗಾಗಿ ದುಡಿದ ವೀರ ಮಹಿಳೆ,

ವಾರದ ಮಲ್ಲಪ್ಪನವರ ಮನೆತನ ಸೊಲ್ಲಾಪುರ ಭಾಗದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೆಸರು ಗಳಿಸಿತ್ತು. ಮಲ್ಲಪ್ಪನವರು ಕೃಷಿ-ಉದ್ದಿಮೆಗಳಿಗಷ್ಟೇ ಅಲ್ಲ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಬಹಳ ಕಾರ್ಯಸಾಧನೆ ಮಾಡಿದರು. ಅವರ ಮೊಮ್ಮಗಳು ಜಯದೇವಿ ಸೊಲ್ಲಾಪುರದಲ್ಲಿ ೧೯೧೨ರಲ್ಲಿ (೨೩-೬-೧೯೧೨) ಜನಿಸಿದಳು. ತಂದೆ ಚೆನ್ನಬಸಪ್ಪ, ತಾಯಿ ಸಂಗವ್ವ (ಭಾಗೀರಥಿ), ಇವರಿಗೆ ಇಬ್ಬರು ಗಂಡುಮಕ್ಕಳು. ಮೂರನೆಯವಳಾಗಿ ಜಯದೇವಿ ಜನಿಸಿದಳು. ತಾಯಿ ಒಳ್ಳೆಯ ಹಾಡುಗಾರ್ತಿ ಹಾಗೂ ವಾಗ್ಮಿಯಾಗಿದ್ದಳು. ಆಗಿನ ಕಾಲದಲ್ಲಿ (೧೯೧೦) ಸ್ಥಾಪಿತವಾಗಿದ್ದ ವಾರದ ಮಲ್ಲಪ್ಪನವರ ವೀರಶೈವ ಮಹಿಳಾ ಜ್ಞಾನ ಮಂದಿರಕ್ಕೆ ಹೋಗಿ ಧಾರ್ಮಿಕ - ಸಾಮಾಜಿಕ - ಸಾಂಸ್ಕೃತಿಕ ಕಾರ್ಯಗಳನ್ನು ಮಾಡುವ ತರಬೇತಿ ಪಡೆದಿದ್ದಳು.

ತಾಯಿಯ ಪ್ರಭಾವದ ಪರಿಣಾಮವಾಗಿ ಜಯದೇವಿಗೆ ಇವೆಲ್ಲ ಸ್ವಾಭಾವಿಕವಾಗಿ ಬಂದುವು. ತಂದೆ ಮಡಕಿ ಚೆನ್ನಬಸಪ್ಪನವರದು ಶ್ರೀಮಂತ ಮನೆತನ, ಆದರೆ ಮಗಳು ಜಯದೇವಿ ಸರಳ ಸಾದಾ ಜೀವಿ. ಕನ್ನಡ ಶಾಲೆಗಳು ಇರಲಿಲ್ಲವಾದ್ದರಿಂದ ಅವಳು ಮರಾಠಿ ಶಾಲೆಗೆ ಹೋಗಬೇಕಾಯಿತು.

ಜಯದೇವಿಯು ಹದಿನಾಲ್ಕು ವರ್ಷದವಳಾಗಿದ್ದಾಗಲೇ ಅವಳನ್ನು ಸೊಲ್ಲಾಪುರದ ಶ್ರೀಮಂತ ಮನೆತನದ ಚೆನ್ನಮಲ್ಲಪ್ಪನವರಿಗೆ ಕೊಟ್ಟು ಬಹಳ ವಿಜೃಂಭಣೆಯಿಂದ ವಿವಾಹ ಮಾಡಿದರು. ಆಗ ವರನಿಗೆ ಕೇವಲ ಹದಿನಾರು ವರ್ಷ. ಅತ್ತೆ ಮನೆಯಲ್ಲಿ ಹಲವಾರು ಹಿರಿಯರಿಂದ ಪ್ರಾರಂಭದಲ್ಲಿ ಕಿರಿಕಿರಿ ಉಂಟಾಗುತ್ತಿತ್ತು. ತವರು ಮನೆಯಲ್ಲಿದ್ದ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಸ್ವಾತಂತ್ರ್ಯ ಅಲ್ಲಿರಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಗಾಣದ ಎತ್ತಿನಂತೆ ದುಡಿದು, ಗಂಡನಿಂದಲೂ ಆಗಾಗ ಶಿಕ್ಷೆ ಪಡೆಯಬೇಕಾಗುತ್ತಿತ್ತು. ಆದರೆ ಇವೆಲ್ಲವನ್ನೂ ಶಾಂತವಾಗಿ ಸಹಿಸಿ ಅತ್ತೆಯ ಮನೆಯವರ ಪ್ರೀತಿಯನ್ನು ಗಳಿಸಿದರು. ಮರಾಠಿ ಆರನೆಯ ಇಯತ್ತೆಯವರೆಗೆ ಅಭ್ಯಾಸ ಮಾಡಿ ನಿಲ್ಲಿಸಿದರು.

ಅತ್ತ ಕರ್ನಾಟಕದ ಏಕೀಕರಣ, ಸೊಲ್ಲಾಪುರ ಭಾಗ ಏಕೀಕೃತ ಕರ್ನಾಟಕದಲ್ಲಿ ಸೇರಬೇಕೆಂಬ ಹಂಬಲ, ರಾಷ್ಟ್ರಭಾಷೆಯ ಬಗ್ಗೆಯೂ ಅವರಿಗೆ ಬಹಳ ಅಭಿಮಾನವಿತ್ತು. ಸೊಲ್ಲಾಪುರ ಭಾಗದಲ್ಲಿ ಕನ್ನಡ ಪ್ರಚಾರ, ಸೊಲ್ಲಾಪುರವು ಔದ್ಯೋಗಿಕ ಕೇಂದ್ರವಾಗಲು ಶ್ರಮಿಸಿದವರು ಕನ್ನಡಿಗರೆಂಬುದನ್ನೂ ಸುತ್ತಲಿನ ವಿಶೇಷವಾಗಿ ದಕ್ಷಿಣದ ಭಾಗಗಳು ಕನ್ನಡ ಪ್ರದೇಶವೆಂದೂ ಜನರಿಗೆ ಮನದಟ್ಟು ಮಾಡಿಕೊಟ್ಟರು. ಅಕ್ಕನ ಜಯಂತಿ, ಬಸವ ಜಯಂತಿ, ನಾಡಹಬ್ಬಗಳಂಥ ವೇದಿಕೆಗಳನ್ನು ಕನ್ನಡ ಪ್ರಚಾರ ಕಾರ್ಯಕ್ಕಾಗಿ ಬಳಸಿಕೊಂಡರು. ತನುಮನಧನಗಳನ್ನು ಕನ್ನಡಕ್ಕಾಗಿ ಅರ್ಪಿಸಿ, ಕನ್ನಡ ಕಟ್ಟುವ ಕಾರ್ಯದೊಡನೆ ಸಾಹಿತ್ಯವನ್ನೂ ರಚಿಸಿದರು. ಜಯದೇವಿಯವರ ಹಿರಿಮೆ ಎಂದರೆ ಜೊತೆಗೆ ತಾವು ಬಲ್ಲ ಮರಾಠಿಯಲ್ಲಿಯೂ ಕೃತಿಗಳನ್ನು ರಚಿಸಿದರು.

ಹೈದರಾಬಾದ್ ಪ್ರದೇಶದಲ್ಲಿ ಕನ್ನಡ ಉಳಿಸಿ ಬೆಳೆಸಲು ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಸ್ವಂತ ಖರ್ಚಿನಿಂದ ಶಿಕ್ಷಕರನ್ನು ನೇಮಿಸಿದರು. ಕನ್ನಡಿಗರ ಪ್ರೀತಿಗೆ ಪಾತ್ರರಾದರು. ಮಹಾಜನ ವರದಿಯ ಅನುಷ್ಠಾನಗೊಳಿಸಲು ಇಂದಿರಾ ಗಾಂಧಿಯವರನ್ನು ಕೇಳಿಕೊಂಡಿದ್ದರು. ಆದರೆ ಅವರು ಮರಣ ಹೊಂದುವವರೆಗೆ ಅದು ಸಾಧ್ಯವಾಗಲಿಲ್ಲ. ಇನ್ನೂ ಸಾಧ್ಯವಾಗಿಲ್ಲ.

**91.** ಜಯದೇವಿ ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ತರಬೇತಿ ಪಡೆದಿದ್ದು ಎಲ್ಲಿ ?

(1) ಸೊಲ್ಲಾಪುರ

(2) ಹೈದರಾಬಾದ್

(3) ಬೆಳಗಾಂ

(4) ವಾರದ ಮಲ್ಲಪ್ಪನವರ ವೀರಶೈವ ಜ್ಞಾನ ಮಂದಿರ

**92.** ಜಯದೇವಿ ಸ್ವಾಭಾವಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಲು ಪ್ರೇರಣೆ ಯಾರದು ?

(1) ತಂದೆ ಮಡಕಿ ಚನ್ನಬಸಪ್ಪ

(2) ಸ್ವಾತಂತ್ರ್ಯ ಚಳುವಳಿ

(3) ಅಣ್ಣಂದಿರು

(4) ತಾಯಿ ಸಂಗವ್ವನ ಪ್ರಭಾವ

**93.** ಕನ್ನಡ ಪ್ರಚಾರಕ್ಕಾಗಿ ಅವರು ಕೆಳಕಂಡ ಯಾವ ವೇದಿಕೆಯನ್ನು ಬಳಸಿಕೊಂಡಿಲ್ಲ ?

(1) ಬಸವ ಜಯಂತಿ

(2) ಗಣೇಶ ಉತ್ಸವ

(3) ನಾಡ ಹಬ್ಬ

(4) ಅಕ್ಕನ ಜಯಂತಿ

**94.** ಜಯದೇವಿಯವರ ಯಾವ ಆಸೆ ಈಡೇರಲೇ ಇಲ್ಲ ?

(1) ಕನ್ನಡ ಶಿಕ್ಷಕರ ನೇಮಕ

(2) ಮಹಾಜನ ವರದಿಯ ಅನುಷ್ಠಾನ

(3) ಮರಾಠಿ ಭಾಷೆಯಲ್ಲಿ ಸಾಹಿತ್ಯ ರಚನೆ

(4) ಕನ್ನಡ ಶಾಲೆಗಳ ಸ್ಥಾಪನೆ

**95.** 'ಸ್ವಾಭಾವಿಕ' ಪದದ ವಿರುದ್ಧ ಪದ

(1) ಅಸಹಜ

(2) ಅಸ್ವಾಭಾವಿಕ

(3) ಅಕೃತಕ

(4) ಅನಾಮಿಕ

**96.** ಗಾಣದ ಎತ್ತಿನಂತೆ ದುಡಿಮೆ ಎಂದರೆ-

(1) ಎಣ್ಣೆ ತೆಗೆಯುವುದು

(2) ಕಬ್ಬು ಅರೆಯುವುದು

(3) ಸುತ್ತುವುದು

(4) ಒಂದೇ ಸಮನಾದ ನಿರಂತರ ಕೆಲಸ

**97.** 'ವರನಿಗೆ'-ಪದದಲ್ಲಿರುವ ವಿಭಕ್ತಿ ಪ್ರತ್ಯಯ ಯಾವುದು ?

(1) ಚತುರ್ಥಿ ವಿಭಕ್ತಿ

(2) ಪಂಚಮಿ

(3) ಸಪ್ತಮಿ

(4) ದ್ವಿತೀಯಾ ವಿಭಕ್ತಿ

**98.** 'ಕಿರಿಕಿರಿ' ಪದವು -

(1) ದ್ವಿರುಕ್ತಿ

(2) ನಾಮವಾಚಕ

(3) ಗ್ರಾಮ್ಯ ಪದ

(4) ಜೋಡುನುಡಿ

**99.** ಜಯದೇವಿ ತಾಯಿಯ ಅತ್ತೆಯ ಮನೆ ಇವರನ್ನು ನೋಡಿಕೊಂಡಿದ್ದು ಹೇಗೆ?

(1) ದಯೆಯಿಂದ

(2) ಪ್ರೀತಿಯಿಂದ

(3) ಸಿಟ್ಟಿನಿಂದ

(4) ಬಹಳ ಕ್ರೂರವಾಗಿ

***ನಿರ್ದೇಶನಗಳು:*** *ಈ ಕೆಳಗಿನ ಕವನವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರ.ಸಂ. 100 ರಿಂದ 105 ರವರಿಗೆ) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.*

ರಾತ್ರಿ, ಮಳೆ ಮಿಂಚು, ವಿದ್ಯುತ್ತು ಹೋಗಿದೆ.

ನೀವು ಬಂದಾಗ ಮನೆಗೆ ಏನೇನೂ ಕಾಣುತ್ತಿಲ್ಲ.

ಹೇಗೋ ಬಾಗಿಲು ತೆಗಿದು ಒಳಗೆ ಬರುವಿರಿ,

ಬಂದು ಕಡ್ಡಿ ಪೆಟ್ಟಿಗೆಗಾಗಿ ತಡವರಿಸುವಿರಿ, ಇಲ್ಲ. ಸಿಗಲಿಲ್ಲ.

ಸಿಡಿಮಿಡಿ. ಮನೆಯೊಡತಿ ಸಂಜೆಯೇ

ರಜ ಎಂದು ಮಗನೊಡನೆ ತಾಯಿಯೂರಿಗೆ,

ನೀವು ಚಡಪಡಿಸುವಿರಿ ಈಗ.

ಅಡುಗೆ ಮನೆಯಲ್ಲಾಕೆ ಕಿಟಕಿಯಲ್ಲಿಡುತ್ತಿದ್ದಳಲ್ಲವೇ ಹಣತೆಯನು ?

ಹಣತೆ ಸಿಕ್ಕಿತು. ಅಲ್ಲೆ...ಅಲ್ಲೆ...ಕೆಳಗಡೆ ಹುಡುಕಿ ಇದ್ದೀತು ಕಡ್ಡಿ ಪೆಟ್ಟಿಗೆ,

ಹೌದು ಅಲ್ಲಿ ಇದೆ, ಈಗ ಕಡ್ಡಿಯ ಗೀರಿ ಮಣಿದೀಪ ಹೊತ್ತಿಸಿ.

ದೀಪವಷ್ಟೇ ಮೊದಲು ಕಾಣುವುದು, ಆಮೇಲೆ

ಕಾಣುವುವು : ಪ್ಲಾಸ್ಕು...ಬಿಸಿಅಡುಗೆ ..ಕಾಸಿದಹಾಲು.

ಪ್ರೀತಿ....ಕಳಕಳಿ...ಅಕ್ಕರಾಸ್ತೆ. ಕವಿತೆಯ ಸಾಲು,

**100.** ಪೂರ್ಣ ಕವನದ ವಸ್ತು :

(1) ಹೆಣ್ಣಿಗಿರುವ ಜವಾಬ್ದಾರಿ, ಪ್ರೀತಿ

(2) ಗಂಡಿನ ಬೇಜವಾಬ್ದಾರಿ

(3) ಗಂಡಸಿನ ಆತಂಕ

(4) ಹೆಂಡತಿ ಇಲ್ಲದಿರುವ ಕೊರತೆ

**101.** ಕಡ್ಡಿ ಗೀರಿದಾಗ ಅವನಿಗೆ ಕಂಡಿದ್ದೇನು ?

(1) ಬಿಸಿ ಅಡುಗೆ, ಕಾಸಿದ ಹಾಲು

(2) ದೀಪವಷ್ಟೆ ಕಂಡಿದ್ದು

(3) ಸಂಪೂರ್ಣವಾದ ಅಡುಗೆ ಮನೆ

(4) ಮನೆಯವಳ ಅಂತರಾತ್ಮ

**102.** "ಮನೆಯೊಡತಿ" ಈ ಪದದಲ್ಲಿನ ಸಂಧಿ

(1) ಲೋಪಸಂಧಿ

(2) 'ಯ'ಕಾರಾಗಮ ಸಂಧಿ

(3) ಆದೇಶ ಸಂಧಿ

(4) ಸವರ್ಣದೀರ್ಘ ಸಂಧಿ

**103.** ಅಕ್ಕರಾಸ್ತೆ ಈ ಪದ ಸಮುಚ್ಚಯದಲ್ಲಿರುವ ಪದಗಳು ಎಷ್ಟು ?

(1) ಎರಡು

(2) ಮೂರು

(3) ನಾಲ್ಕು

(4) ಒಂದು

**104.** 'ಕಿಟಕಿಯಲ್ಲಿ' ಈ ಪದದಲ್ಲಿರುವ ವಿಭಕ್ತಿಯ ಸ್ವರೂಪ

(1) ಚತುರ್ಥಿ

(2) ಸಪ್ತಮಿ

(3) ದ್ವಿತೀಯ

(4) ಪಂಚಮಿ

**105.** ಗೀರು - ಈ ಪದದ ಅರ್ಥ

(1) ಚಾಚು

(2) ಕೆರೆ

(3) ಸಾಲು

(4) ಎಳೆ

**ನಿರ್ದೇಶನಗಳು :** *ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಉತ್ತರಿಸಿ (106 ರಿಂದ 120 ರವರೆಗೆ).*

**106.** ಮೂರನೇ ತರಗತಿಯ ಶಿಕ್ಷಕರೊಬ್ಬರು ವಿದ್ಯಾರ್ಥಿಗಳ ಮುಂದೆ ಹೊಸ ಪದಪುಂಜಗಳನ್ನು ಪ್ರಸ್ತುತಪಡಿಸುತ್ತಾರೆ. ಹಾಗೆ ಹೊಸ ಪದಪುಂಜಗಳನ್ನು ಪ್ರಸ್ತುತಪಡಿಸುವ ವಿಧಾನಗಳಲ್ಲಿ ಈ ಮುಂದಿನ ವಿಧಾನಗಳಲ್ಲೊಂದು ತುಂಬಾ ಪರಿಣಾಮಕಾರಿ ವಿಧಾನವಾಗಿದೆ, ಅದೆಂದರೆ

(1) ಶಿಕ್ಷಕರು ಆ ಪದದ ಸಂಕ್ಷಿಪ್ತ ಅರ್ಥವನ್ನು ನೀಡಬೇಕು

(2) ಶಿಕ್ಷಕರು ಆ ಪದವನ್ನು ಯಾವ ಸನ್ನಿವೇಶದಲ್ಲಿ ಬಳಸಲಾಗುತ್ತದೆಯೋ ಅಂತಹ ಸನ್ನಿವೇಶದ ಪರಿಕಲ್ಪನೆಯಲ್ಲಿ ಅದರ ಅರ್ಥವನ್ನು ವಿವರಿಸುವುದಕ್ಕೆ ಪ್ರಯತ್ನಿಸಬೇಕು

(3) ಶಿಕ್ಷಕರು ಆ ಪದದ ಅರ್ಥವನ್ನು ಕಪ್ಪು ಹಲಗೆಯ (Blackboard) ಮೇಲೆ ಬರೆದು ಅದನ್ನು ಆಂತರ್ಯದಿಂದ (by heart) ಕಲಿಯುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕು.

(4) ಶಿಕ್ಷಕರು ಆ ಪದಗಳ ವಿರುದ್ಧಾರ್ಥದ ಪದಗಳನ್ನು ಅವರಿಗೆ ಹೇಳಿ, ಅವರ ಬಾಷೆಯಲ್ಲಿ ಆ ಪದಗಳ ಅರ್ಥವನ್ನು ನೀಡಬೇಕು

**107.** ಭಾಷೆಯನ್ನು ಕಲಿಯುವ ವಿಷಯ ಒಂದು --------

(1) ಪ್ರಕ್ರಿಯೆ (process)

(2) ಉತ್ಪನ್ನ (product)

(3) ಕೌಶಲ್ಯ (skill)

(4) ಅರ್ಜನೆ (acquisition)

**108.** ಉದಾಹರಣೆಯೊಂದಿಗೆ ಹೊಂದಾಣಿಕೆಯಾಗುವ ತಂತ್ರವನ್ನು ಆಯ್ಕೆ ಮಾಡಿ *'ನಾನು ಬಳಸುವ ಭಾಷೆಯು ಸರಿಯೆಂದು ಖಚಿತ ಪಡಿಸಲು ಅದರ ಮೇಲೆಯೇ ಗಮನ ಕೇಂದ್ರೀಕರಿಸುತ್ತೇನ'*

(1) ಪುನರಾವರ್ತನೆ ಮಾಡುವುದು

(2) ಸ್ವಯಂ - ಮೇಲ್ವಿಚಾರಣೆ

(3) ಭಾಷಾತೀತವಾಗಿ ಗಮನಿಸುವುದು (Translanguaging)

(4) ಬಾಯಿಪಾಠ ಮಾಡುವುದು

**109.** ಎರಡನೆಯ ತರಗತಿಯ ವಿದ್ಯಾರ್ಥಿಗಳು ತಲೆ ಮತ್ತು ಭುಜಗಳು, ಮೊಣಕಾಲು ಮತ್ತು ಕಾಲ್ಬೆರಳು ಎಂದು ಹಾಡನ್ನು ಹಾಡುತ್ತಲೇ ತಮ್ಮ ಶರೀರದ ಆಯಾ ಅಂಗಗಳನ್ನು ಸರಿಯಾಗಿ ಮುಟ್ಟಿಕೊಳ್ಳುತ್ತಾರೆ ಶಿಕ್ಷಕರು ಯಾವ ವಿಧಾನ ಅನುಸರಿಸಿ ಪಾಠ ಮಾಡುತ್ತಿದ್ದಾರೆ

(1) ಸಂವಹನಾತ್ಮಕ ಭಾಷಾ ಕಲಿಕೆ

(2) ಸಂಪೂರ್ಣ ಭೌತಿಕ ಪ್ರತಿಕ್ರಿಯೆ ಮೂಲಕ

(3) ಸಾರ ಸಂಗ್ರಹ ವಿಧಾನದ ಮೂಲಕ

(4) ಶ್ರವ್ಯ ಭಾಷೆಯ ಮೂಲಕ (Audio-lingual)

**110.** ಓದುವ ವಿಧಾನಗಳು

A. ಊಹಿಸುವುದು

B. ಊಹಾತ್ಮಕ ವಿಧಾನ

C. ಸಂದರ್ಭಗಳಿಂದ ಅರ್ಥವನ್ನು ತರ್ಕಿಸುವುದು

D. ಸೂಕ್ಷ್ಮವಾದ ಓದು

E. ಪಠ್ಯ ಸಂರಚನೆಯನ್ನು ಗುರುತಿಸುವುದು

ಓದುಗರು ಏನು ಮಾಡಬೇಕು ?

i. ಲೇಖಕರು ತಾವು ಹೇಗೆ ಬರೆಯುತ್ತಾರೋ ಅದರ ಆಧಾರದ ಮೇಲೆ ಹೇಗೆ ಆಲೋಚಿಸುತ್ತಾರೆ ಎಂಬುದನ್ನು ನಿರ್ಧರಿಸುವುದು

ii. ಪರಿಚಿತವಲ್ಲದ ಪದ ಸಂಪತ್ತನ್ನು ಅರ್ಥಮಾಡಿಕೊಳ್ಳಲು ಅವರಿಗೆ ನೆರವಾಗುವಂತೆ ಪಠ್ಯದ ಭಾಗಗಳನ್ನು ಅವರು ಬಳಸುವುದು

iii. ಶೀರ್ಷಿಕೆಗಳು ಮತ್ತು ಪ್ರಸ್ತಾವನಾ ಪದಾವಳಿಗಳನ್ನು ಗುರುತಿಸುವ ಮೂಲಕ ಮಾಹಿತಿಯನ್ನು ಹೇಗೆ ವ್ಯವಸ್ಥೆಗೊಳಿಸಲಾಗಿದೆ ಎಂಬುದನ್ನು ಅವರು ಗಮನಿಸುವುದು

iv. ಪಠ್ಯ ಭಾಗದಲ್ಲಿ ಭಾಷೆಯನ್ನು ಹೇಗೆ ಬಳಸಲಾಗಿದೆ ಎಂಬುದರ ಕಡೆಗೆ ಗಮನ ಹರಿಸುವುದು

v. ಪಠ್ಯ ಯಾವುದರ ಬಗ್ಗೆ ಇದೆ ಎಂಬ ಬಗ್ಗೆ ಸ್ವತಃ ಅವರೇ ಯೋಚಿಸಿ ಹೇಳುವ ಹಾಗೆ ಶೀರ್ಷಿಕೆಗಳನ್ನು ಮತ್ತು ಚಿತ್ರಗಳನ್ನು ಬಳಸುವುದು

ಮೇಲೆ ಹೇಳಿದ ಓದುವ ವಿಧಾನದಲ್ಲಿ ಓದುಗರು ಅನುಸರಿಸುವಂತಹ ವಿಧಾನದೊಂದಿಗೆ ಓದುವ ವಿಧಾನವನ್ನು ಹೊಂದಿಸಿ ಬರೆಯಿರಿ

(1) A-i, B-iv, C-v, D-ii, E-iii

(2) A-ii, B-i, C-iii, D-iv, E-v

(3) A-iv, B-iii, C-ii, D-i, E-v

(4) A-v, B-i, C-ii, D-iv, E-iii

**111.** ವಿದ್ಯಾರ್ಥಿಗಳು ಹಿಂದಿನ ಪಠ್ಯದಿಂದ (unit) ಶಬ್ದ ಕೋಶದ ಬಗ್ಗೆ ಐದು ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕೆ ಗುಂಪುಗಳಲ್ಲಿ ತೊಡಗಿಕೊಂಡಿದ್ದಾರೆ ಆಗ ಅವರು ಬೇರೆ ಗುಂಪಿನೊಂದಿಗೆ ಪ್ರಶ್ನೆಗಳನ್ನು ವಿನಿಮಯ ಮಾಡಿಕೊಂಡು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುತ್ತಾರೆ. ಇದು ಈ ಮುಂದಿನ ವಿಧಾನಕ್ಕೆ ಉದಾಹರಣೆಯಾಗಿದೆ.

(1) ಮಾಹಿತಿ ಒದಗಿಸುವಿಕೆ

(2) ಓದುವ ಮೌಲ್ಯ ಮಾಪನ

(3) ಸಹಾಧ್ಯಾಯಿಗಳ (Peer) ಮೌಲ್ಯಮಾಪನ

(4) ಸ್ವಯಂ ಮೌಲ್ಯಮಾಪನ

**112.** ಶಿಕ್ಷಕರು ಒಂದು ಕಾರ್ಡ್ ಮೇಲೆ ಒಂದು ಪದ ಅಥವಾ ಪದ ಪುಂಜಗಳನ್ನು (phrase) ಬರೆದು ನನಗೆ ನೀಡಿದಾಗ, ಅದು ನನಗೆ ಇಷ್ಟವಾಗುತ್ತದೆ . ಮತ್ತು ನಾನು ಉಳಿದ ತರಗತಿಗೆಲ್ಲಾ ಆ ಪದವನ್ನು ಊಹೆ ಮಾಡುವುದಕ್ಕೆ ಹಾಗೆ ಮಾಡಬೇಕಾಗುತ್ತದೆ . ಕೆಳಗೆ ಪಟ್ಟಿ ಮಾಡಲಾದ ವಿದ್ಯಾರ್ಥಿಗಳ ಅಧ್ಯತೆಗಳೊಂದಿಗೆ ಅವರ ಅಭಿಪ್ರಾಯಗಳನ್ನು ಗುರುತಿಸಿ.

(1) ಅದನ್ನು ನಾನು ಕೇಳಿದಾಗ, ನಾನು ಭಾಷೆಯನ್ನು ಚೆನ್ನಾಗಿ ನೆನಪಿಸಿ ಕೊಳ್ಳುತ್ತೇನೆ

(2) ಕಾರ್ಡ್‌ನ ಪದಪುಂಜಗಳನ್ನು ನೆನಪಿಸಿಕೊಂಡಾಗ, ನಾನು ಭಾಷೆಯನ್ನು ಚೆನ್ನಾಗಿ ನೆನಪಿಸಿ ಕೊಳ್ಳುತ್ತೇನೆ

(3) ನಾನು ಯಾಂತ್ರಿಕವಾಗಿ ತೊಡಗಿಕೊಂಡಾಗ , ನಾನು ಭಾಷೆಯನ್ನು ಚೆನ್ನಾಗಿ ನೆನಪಿಸಿ ಕೊಳ್ಳುತ್ತೇನೆ

(4) ಅದನ್ನು ನಾನು ನೋಡಿದಾಗ, ನಾನು ಭಾಷೆಯನ್ನು ಚೆನ್ನಾಗಿ ನೆನಪಿಸಿಕೊಳ್ಳುತ್ತೇನೆ

**113.** *ಪ್ರತಿಪಾದನೆ (ಎ) :*
ಶಾಲೆ ಪ್ರವೇಶಿಸುವ ಎಲ್ಲ ಮಕ್ಕಳೂ ಅವರ ವಯಸ್ಸಿಗೆ ಸಮರ್ಥವಾಗಿ ಭಾಷೆ ಬಳಸುವವರೇ ಆಗಿರುತ್ತಾರೆ.
*ಕಾರಣ (ಆರ್) :*
ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯಿಂದಾಗಿ ಅವರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಅಸಮರ್ಥರಾಗಿರುತ್ತಾರೆ.
ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆಗಳನ್ನು ಆರಿಸಿ :

(1) (ಎ) ಮತ್ತು (ಆರ್): ಎರಡು ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ ಅಲ್ಲ

(2) (ಎ) ಸರಿ ಆದರೆ (ಆರ್) ತಪ್ಪು

(3) (ಎ) ತಪ್ಪು ಆದರೆ (ಆರ್) ಸರಿ

(4) (ಎ) ಮತ್ತು (ಆರ್): ಎರಡೂ ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ

**114.** ಐದನೇ ತರಗತಿಯ ಮಂಜೀತ್ ತನ್ನ ಶಿಕ್ಷಕರೊಡನೆ, ತನ್ನ ಸ್ನೇಹಿತರೊಡನೆ ಹಾಗೂ ಎರಡು ವರ್ಷದ ಮಗುವಿನ ಜೊತೆಗೆ, ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಾನೆ. ಇದರರ್ಥ ಮಂಜೀತನಿಗೆ ಸಮಾಜದಲ್ಲಿ ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ಹೇಗೆ ಬಳಸಬೇಕೆಂದು ತಿಳಿದಿದೆ. ಈ ರೀತಿಯ ಭಾಷಾ ಬಳಕೆಯ ವೈಶಿಷ್ಟ್ಯತೆಯನ್ನು ಏನೆಂದು ಕರೆಯುತ್ತಾರೆ ?

(1) ಶಬ್ದಾರ್ಥ ವಿಜ್ಞಾನ (Semantics)

(2) ಪ್ರಾಯೋಗಿಕ ವಾದಿ (Pragmatics)

(3) ಮಾತನಾಡುವ ಕ್ರಿಯೆ (Act of speech)

(4) ವಾಸ್ತವಿಕ ವಾದಿ (Naturalist)

**115.** ತಾಯಿಯೊಬ್ಬಳು ತನ್ನ ಮಗು ತಾನೆಂದೂ ಕೇಳಿರದ ವಯಸ್ಕರು ಅಥವಾ ಸಹೋದರರು ಮಾತನಾಡುವಂತಹ ಮಾತುಗಳನ್ನು ಆಡುವುದನ್ನು ಗಮನಿಸುತ್ತಾಳೆ. ತಾಯಿ ಮಗು ತನ್ನ ಕುಟುಂಬದವರು ಮತ್ತು ನಿಕಟ ನೆರೆಹೊರೆಯವರನ್ನು ಅನುಕರಿಸುವ ಮೂಲಕ ಭಾಷೆಯನ್ನು ಕಲಿಯುತ್ತದೆಂದು ಭಾವಿಸಿದ್ದರಿಂದ ಅವಳು ಗೊಂದಲಕ್ಕೊಳಗಾಗಿದ್ದಾಳೆ ಅವಳ ನಂಬಿಕೆ ಈ ಮುಂದಿನವುಗಳೊಂದಿಗೆ ಸಂಬಂಧಿಸಿದೆ.

(1) ವರ್ತನಾ ಸಿದ್ಧಾಂತ (Behaviourism)

(2) ರಾಚನಿಕ ವಾದ (Constructivism)

(3) ಬಹು ಭಾಷೀಯ ವಾದ (Multilingualism)

(4) ಸಹಜ ಜ್ಞಾನ ಸಿದ್ಧಾಂತ (Nativism)

116. ಮಕ್ಕಳು ಔಪಚಾರಿಕ ಕಲಿಕಾ ಅಧ್ಯಯನವನ್ನು ಆರಂಭಿಸುವುದಕ್ಕೆ ಮೊದಲು ರೂಪಿತಗೊಳ್ಳುವ ಮತ್ತು ನಂತರದ ಶೈಕ್ಷಣಿಕ ಕೌಶಲ್ಯಗಳಿಗೆ ಅಡಿಪಾಯವನ್ನು ಒದಗಿಸುವ ಕೌಶಲ್ಯಗಳನ್ನು ಈ ಕೆಳಗಿನಂತೆ ಕರೆಯುತ್ತಾರೆ.

(1) ಪ್ರಾರಂಭಿಕ ಪಠ್ಯಕ್ರಮ

(2) ಪ್ರಾರಂಭಿಕ ಗುಣಲಕ್ಷಣಗಳು

(3) ಪ್ರಾರಂಭಿಕ ಅಕ್ಷರಜ್ಞಾನ

(4) ಪ್ರಾರಂಭಿಕ (emergent) ಪರಿಹಾರ

117. ಅಜ್ಜಿ ತನ್ನ ಮೊಮ್ಮಕ್ಕಳಿಗೆ ಪುಸ್ತಕಗಳಿಂದ ಕತೆಗಳನ್ನು ಓದಿಹೇಳಲು ಇಷ್ಟಪಡುತ್ತಾಳೆ. ಈ ವಿಧಾನದ ಮೂಲಕ ಮಕ್ಕಳನ್ನು ಪುಸ್ತಕಗಳ ಕತೆಗೆ ಮತ್ತು ಹೊಸ ಹೊಸ ಆಲೋಚನೆಗಳ ಕಡೆಗೆ ಕರೆದೊಯ್ಯುತ್ತಾಳೆ. ಮಕ್ಕಳೂ ಸಹ ಈ ವಿಧಾನದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಾರೆ. ಈ ವಿಧಾನವು ಈ ರೀತಿ ಪ್ರಸಿದ್ಧವಾಗಿದೆ.

(1) ಸಾಮೂಹಿಕ ಓದುವಿಕೆ

(2) ಸಂವಾದದ ರೂಪದಲ್ಲಿ ಓದುವಿಕೆ

(3) ಜೋರಾಗಿ ಓದುವುದು

(4) ಮಾದರಿ ಓದುವಿಕೆ

118. ಅಕ್ಷರಗಳು ಮತ್ತು ಸ್ವನಿಮಾಗಳಂತಹ (Phonemes) ಮೂಲ ಘಟಕಾಂಶಗಳೊಂದಿಗೆ ಪ್ರಾರಂಭವಾಗುವ ಓದುವಿಕೆಯನ್ನು ಕಲಿಸುವ ಮತ್ತು ಇಡಿಯಾಗಿ ಓದುವುದಕ್ಕೆ ಹೋಗುವ ಮುನ್ನ ಸ್ವನಿಮಾಗಳನ್ನು ಪದಗಳೊಂದಿಗೆ ಸೇರಿಸಬಹುದೆಂದು ಮಕ್ಕಳಿಗೆ ಕಲಿಸುವ ವಿಧಾನವನ್ನು ಈ ಕೆಳಗಿನಂತೆ ಕರೆಯುತ್ತಾರೆ

(1) ಬಾಟಮ್ ಡೌನ್ ಅಪ್ರೋಚ್ (Bottom-up approach)

(2) ಇಡಿಯಾಗಿ ಭಾಷೆ ಕಲಿಯುವ ವಿಧಾನ

(3) ರಾಚನಿಕ ವಿಧಾನ

(4) ಟಾಪ್ ಡೌನ್ ಅಪ್ರೋಚ್ (Top-down approach)

119. *ಪ್ರತಿಪಾದನೆ (ಎ) :*

ಸ್ವನ ಉಚ್ಚಾರದ ಬಳಕೆಯಿಂದ ಸರಿಯಾಗಿ ಉಚ್ಚಾರ ಮಾಡುವುದನ್ನು ಕಲಿಯುವ ಸಾಮರ್ಥ್ಯ ಕಡಿಮೆಯಾಗುತ್ತದೆ.

*ಕಾರಣ (ಆರ್) :*

ಚಿಕ್ಕ ಮಕ್ಕಳು ರೂಢಿಗತ ಉಚ್ಚಾರಗಳಿಂದ ತಾವೇ ಕಂಡುಕೊಂಡ ಉಚ್ಚಾರಗಳನ್ನು ಬಳಸಿದಾಗ, ಅದರಿಂದ ಅವರು ಸರಿಯಾಗಿ ಉಚ್ಚಾರಣೆ ಮಾಡಬೇಕೆಂಬುದನ್ನು ಕಲಿಯುವ ಸಾಮರ್ಥ್ಯ ಕುಂಠಿತವಾಗುತ್ತದೆ.

ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆಗಳನ್ನು ಆರಿಸಿ :

(1) (ಎ) ಮತ್ತು (ಆರ್): ಎರಡೂ ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ ಅಲ್ಲ

(2) (ಎ) ಸರಿ ಆದರೆ (ಆರ್) ತಪ್ಪು

(3) (ಎ) ತಪ್ಪು ಆದರೆ (ಆರ್) ಸರಿ

(4) (ಎ) ಮತ್ತು (ಆರ್): ಎರಡೂ ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ

120. ಹೊಸ ಭಾಷೆಯನ್ನು ಕಲಿಯುವಾಗ, ಹಲವಾರು ವಿದ್ಯಾರ್ಥಿಗಳು ಭಾಷೆಯ ವಿಶಿಷ್ಟ ಉಚ್ಚಾರಣಾ ನಿಯಮಗಳಿಂದಾಗಿ ಮಾತನಾಡುವಾಗ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಈ ಸಮಸ್ಯೆಯನ್ನು ಮೀರುವ ಒಂದು ವಿಧಾನವೆಂದರೆ

(1) ತರಗತಿಯಲ್ಲಿ ಮೌಖಿಕವಾಗಿ ಪರಸ್ಪರ ಸಂವಹನವಿರುವಂತಹ ಆಟದಂತಹ ಚಟುವಟಿಕೆಗಳನ್ನು ಆರಿಸುವುದು

(2) ಸಮಾಲೇಖಕರ ಬಳಿ ವಿಶೇಷವಾಗಿ ಮಾತನಾಡುವ ಚರಿತ್ರೆ ಕಲಿಕೆಯ ತರಬೇತಿ ನೀಡುವುದು. ಮತ್ತು ತೀವ್ರ ಅಭ್ಯಾಸದ ಮೂಲಕ ಕ್ರಮಬದ್ಧವಾಗಿ ಅಭ್ಯಾಸ ಮಾಡಿಸುವುದು

(3) ತಪ್ಪುಗಳಾದಾಗಲೆಲ್ಲ ಅವುಗಳನ್ನು ಸರಿಪಡಿಸುವುದು

(4) ಮಕ್ಕಳು ತರಗತಿಯಲ್ಲಿ ಜೋರಾಗಿ ಓದುವುದು

ಅಭ್ಯರ್ಥಿಗಳು **ಕನ್ನಡವನ್ನು ಭಾಷೆ II** ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

→

# ಭಾಗ V
# ಭಾಷೆ II
# ಕನ್ನಡ

***ನಿರ್ದೇಶನಗಳು : ಈ ಕೆಳಗಿನ ಲೇಖನದ ಭಾಗವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರ.ಸಂ. 121 ರಿಂದ 128 ರವರೆಗೆ) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.***

ಠಾಕೂರ್ : ನೀ ಏನು ಮಾಡಾಕತ್ತಿ ನಿನಗೆ ತಿಳೀವಲ್ಲದು.
ತೈಮೂರ : ಅಲೋ ದೋಸ್ತ, ಸೀರಿಯೊಳಗ ಕಾಟಿನ ಮ್ಯಾಲ ಬಿದ್ದಕೊಂಡು ಅಳಾಕತ್ತಾನ, ಮಗಾ
ಮಾಧವ : ರಣಜಿತ, ಇದು ಸರಿ ಆಗಲಿಲ್ಲ.
ತೈಮೂರ : ದೋಸ್ತ, ಇಂಥಾ ಮಜಾಗೋಳು ನಡೆಯ್ತಾವು ಹಾಸ್ಟೆಲ್ ಅದರಾಗೇನದ? ಲಾಲೂ, ಹೆಂಗ ಮಜಾ ಬಂತು ? ನೀ ಉಡತೀಯೇನ ಸೀರೀ ?
ರಣಜಿತ : ಏಯ್ ಬಿಡೋ ಮಕ್ಕಳ, ಲಾಲೂಗ ಯಾರೂ ಟ್ಯಾಪ್ಟಿ ಮಾಡೂಹಂಗಿಲ್ಲ, ನಮ್ಮ ಗ್ಯಾಂಗಿನವ ಅಂಟ.
ತೈಮೂರ : ಲಾಲೂ ಅಪ್ ಸೆಟ್ ಆಗ್ಯಾನ ಇನ್ನೂ ಎಳಕ ಅದಾನೋ. ವರ್ಷದಾಗ ತಯಾರಾಗ್ತಾನ ನೋಡು
ವಸಂತ : (ತೈಮೂರನಿಗೆ) ನಿನಗ ನಿನ್ನ ಕುಂಟತನದ ಬಗ್ಗೆ ಯಾರರ ಛೇಡಿಸಿದರ ಹೆಂಗ ಅನಸ್ತದ ?
ತೈಮೂರ : (ನಿರ್ಲಕ್ಷ್ಯದ ಧ್ವನಿಯಲ್ಲಿ): ಅಂದರ ನನ್ನ ಕುಂಟಗಾಲಿನ ಬಗ್ಗೆ ? ಮಕ್ಕಳು ನೀವು, ನೀವೇನು ಅಣಗಸೂದಿಲ್ಲೇನು ನನಗ ? ಹೆಸರು ಇಟ್ಟರೆಪಾ ನೀವು ನನಗ, ತೈಮೂರ ಅಂತ.
ಲಾಲು : ನಿನಗೆ ಕೆಟ್ಟ ಅನಸೂದುಲ್ಲ...?
ತೈಮೂರ : ಅದರಾಗ ಕೆಟ್ಟ ಅನಸೂದ ಏನದ? ಸ್ಪೋರ್ಟಿವ್ ಇರಬೇಕಪಾ
ಠಾಕೂರ್ : ಹೌದು ದೋಸ್ತ, ಇಂವನ ಮಾತು ಒಪ್ಪಲಿಕ್ಕೇ ಬೇಕು, ಎಷ್ಟು ಕಾಡಿಸಿದರೂ ಇಂವ ಕೆಟ್ಟ ಅನ್ನಿಸಿಕೊಳ್ಳೋದುಲ್ಲ. ಸಾಕಷ್ಟು ಸ್ಪೋರ್ಟಿವ್ ಅದಾನ. ಶ್ರೀವಾಸ್ತವ ಗಡಿಬಿಡಿಯಿಂದ ಬರುತ್ತಾನೆ.
ಶ್ರೀವಾಸ್ತವ : (ಏದುಸಿರು ಬಿಡುತ್ತ) ರಣಜಿತ.
ಠಾಕೂರ್ : (ಗಾಬರಿಯಿಂದ) ಏನಾತೋ ?
ಶ್ರೀವಾಸ್ತವ : ರಣಜಿತ...
ಗೋಪಾಲ : ದೆವ್ವನ್ನು ಏನರ ನೋಡಿದ್ದೇನು ?
ಶ್ರೀವಾಸ್ತವ ತುಂಬ ಗಾಬರಿಯಾಗಿದ್ದಾನೆ. ಇಲ್ಲ ಎನ್ನುವಂತೆ ಕತ್ತು ಅಲ್ಲಾಡಿಸುತ್ತಾನೆ ಅವನ ಬಾಯಿಂದ ಮಾತು ಹೊರಬರುತ್ತಿಲ್ಲ.
(ಜೋರು ಧ್ವನಿಯಲ್ಲಿ) ಛೇ ಏನಾತು ಹೇಳ್ತಿಯೋ ಇಲ್ಲೋ ?
ಶ್ರೀವಾಸ್ತವ : (ಬೆರಳಿನಿಂದ ತೋರಿಸುತ್ತ ಅಂವ ಉರಲ ಹಾಕ್ಕೊಂಡಾನು)
ಎಲ್ಲರೂ ಫ್ರೀಜ್ ಆಗುತ್ತಾರೆ, ಶಾಂತತೆ, ನಂತರ ಇಬ್ಬರು ಮೂವರು ಒಮ್ಮೆಲೇ ಹೊರಗೆ ಓಡುತ್ತಾರೆ.
ನಾ ಆ ಕಡೆಂದ ಹೊರಟಿದ್ದೆ... ನಾವು ..... ನಾವು ಏನ ಮಾಡೂಣು ?
ಹೋದವರು ಎಲ್ಲರೂ ಹಿಂದಿರುಗುತ್ತಾರೆ.
ಠಾಕೂರ್ : ಮಾಧವ
ಮಾಧವ : ಹಾಂ.
ಒಮ್ಮೆಲೆ ತೈಮೂರ ತನ್ನ ಊರುಗೋಲನ್ನು ಬೀಸಿ ಗೋಪಾಲನಿಗೆ ಹೊಡೆಯುತ್ತಾನೆ.

**121.** ನಾಟಕದಲ್ಲಿ ಕತೆಯು ಯಾವ ವಸ್ತುವಿನ ಸುತ್ತ ನಡೆದಿದೆ ?
(1) ಮಿತ್ರರ ಆತ್ಮೀಯ ಸಂಭಾಷಣೆ
(2) ಹಾಸ್ಟೆಲ್ ನಲ್ಲಿ ರ್‍ಯಾಗಿಂಗ್
(3) ಗೆಳೆಯರು ಒಂದು ಗ್ಯಾಂಗ್ ಆಗುವ ಬಗ್ಗೆ
(4) ಗೆಳೆಯರ ನಡುವೆ ಜಗಳ

**122.** ಗೆಳೆಯರಲ್ಲಿ ಒಬ್ಬನಿಗೆ ತೈಮುರ ಎಂದು ಹೆಸರು ಯಾಕೆ ಬಂತು ?
(1) ಅವನ ಮನೆತನ ತೈಮುರ ವಂಶಜರು
(2) ಅವನು ಮುಸ್ಲಿಂ ಸಮುದಾಯದವನು
(3) ಚಾರಿತ್ರಿಕ ಹೆಸರು ಅವನಿಗೆ ಇಷ್ಟ
(4) ಅವನು ಕುಂಟನಾಗಿದ್ದರಿಂದ

**123.** ಅವನು ಅಳುತ್ತಿದ್ದದ್ದು ಏಕೆ ?

(1) ಅವನ ಹತ್ತಿರ ಷರ್ಟು ಇಲ್ಲದ್ದರಿಂದ

(2) ಅವನಿಗೆ ಸೀರೆ ಇಷ್ಟವಿಲ್ಲದ್ದರಿಂದ

(3) ಅವನಿಗೆ ಸೀರೆ ಉಡಿಸಿದ್ದರಿಂದ

(4) ಅವನ ಗೆಳೆಯರು ಸಹಾಯ ಮಾಡದೆ ಇದ್ದುದರಿಂದ

**124.** 'ದೋಸ್ತ' - ಈ ಪದದ ಮೂಲ ಯಾವುದು ?

(1) ಪೋರ್ಚುಗೀಸ್

(2) ಹಿಂದೂಸ್ತಾನಿ

(3) ಹಿಂದಿ

(4) ಸಂಸ್ಕೃತ

**125.** 'ಉರಲ ಹಾಕ್ಕೊಳ್ಳು' - ಈ ವಾಕ್ಯಾಂಶದ ಅರ್ಥವೇನು ?

(1) ಬೆಂಕಿಗೆ ಕಟ್ಟಿಗೆ ಹಾಕಿ ಕಾಯಿಸು

(2) ಅಡಿಗೆ ಮಾಡುವುದು

(3) ಉರವಲು ಕಡ್ಡಿ ತಂದು ಹಾಕು

(4) ನೇಣು ಹಾಕಿಕೊಳ್ಳು

**126.** 'ಸೀರಿಯೊಳಗ' ಪದದಲ್ಲಿನ ವಿಭಕ್ತಿ ಗುರುತಿಸಿ

(1) ಪಂಚಮಿ

(2) ಚತುರ್ಥಿ

(3) ಸಪ್ತಮಿ

(4) ತೃತೀಯಾ

**127.** ಸತ್ತವನು ಯಾರು ?

(1) ಲಾಲು

(2) ಹೆಸರು ಕೊಟ್ಟಿಲ್ಲ

(3) ರಣಜಿತ

(4) ಮಾಧವ

**128.** 'ಏನಾತು' ಪದದಲ್ಲಿನ ಸಂಧಿ ?

(1) ಲೋಪಸಂಧಿ

(2) ಆಗಮ ಸಂಧಿ

(3) ಆದೇಶ ಸಂಧಿ

(4) ಸವರ್ಣ ಧೀರ್ಘ ಸಂಧಿ

***ನಿರ್ದೇಶನಗಳು:*** *ಈ ಕೆಳಗಿನ ಲೇಖನ ಭಾಗವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರ.ಸಂ. 129 ರಿಂದ 135 ರವರಿಗೆ) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.*

ಈ ಹಿನ್ನೆಲೆಯಲ್ಲಿ ಗೋಕಾಕರ "ಸಮುದ್ರ ಗೀತಗಳು" (೧೯೪೦) ಒಂದು -ಗಮನಾರ್ಹವಾದ ಕವನ ಸಂಕಲನ, ಅದೇನೂ ಅವರ ಮೊದಲ ಕವನ ಸಂಕಲನವಲ್ಲ, ಆದರೆ ನವ್ಯ ಕಾವ್ಯದ ಸೂಚನೆಗಳನ್ನು ಕೊಡುವ ಕೆಲವು ರಚನೆಗಳನ್ನು ಒಳಗೊಂಡಿರುವಂಥ ಕೃತಿ ಎಂಬ ಕಾರಣಕ್ಕೆ ಕುತೂಹಲಕರವಾದುದು. ೧೯೩೭-೩೮ರಲ್ಲಿ ಗೋಕಾಕರು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡುತ್ತಿದ್ದರು. ಆ ಕಾಲದಲ್ಲಿ ಅವರು ಬರೆದ ಕೆಲವು ಕವಿತೆಗಳನ್ನು "ಸಮುದ್ರ ಗೀತಗಳು" ಒಳಗೊಂಡಿದೆ. ಆಗ ಇಂಗ್ಲೆಂಡಿಗೆ ಹೋಗುವವರು ಸಮುದ್ರ ಮಾರ್ಗವಾಗಿ ಪ್ರಯಾಣ ಬೆಳೆಸಬೇಕಿತ್ತು. ಈ ಕವನ ಸಂಗ್ರಹ ಗೋಕಾಕರ ಸಮುದ್ರಯಾನದ ಅನುಭವಗಳನ್ನು ಒಳಗೊಂಡಿದೆ-ಹಲವು ಕವಿತೆಗಳು ಸಮುದ್ರದ ಕುರಿತಾದ ವರ್ಣನೆಯಂತೆ, ಪ್ರಾರ್ಥನೆಯಂತೆ ಪ್ರಗಾಥದಂತೆ ಇದ್ದರೂ ಸಂಕಲನದ ಎಲ್ಲಾ ಕವಿತೆಗಳೂ ಸಮುದ್ರದ ಕುರಿತಾಗಿಯೇ ಅಲ್ಲ. ಇಂಗ್ಲೆಂಡಿನಲ್ಲಿ ಕವಿ ಗಳಿಸಿದ ಕೆಲವು ಅನುಭವಗಳ ಕುರಿತಾದ ಕವಿತೆಗಳೂ ಇವೆ.

ಅದು ಭಾರತದ ಸ್ವಾತಂತ್ರ ಹೋರಾಟ ತೀವ್ರವಾಗುತ್ತಿದ್ದ ಕಾಲ-ಸ್ವಾತಂತ್ರ್ಯಕ್ಕೆ ಒಂದೇ ದಶಕ ದೂರ! ಹಾಗೆಂದು ಯಾರಿಗೆ ಗೊತ್ತಿತ್ತು? ದ್ವಿತೀಯ ಮಹಾಯುದ್ಧ ಇನ್ನೂ ಸುರುವಾಗಿರಲಿಲ್ಲ. ಗೋಕಾಕರು ಭಾರತಕ್ಕೆ ಮರಳಿದ ಎರಡೇ ವರ್ಷಗಳಲ್ಲಿ ಯುದ್ಧವೂ ಸುರುವಾಯಿತು. ಅದೇ ವರ್ಷ "ಸಮುದ್ರ ಗೀತೆಗಳು" ಪ್ರಕಟವಾಯಿತು. ಗೋಕಾಕರು ನೇರವಾಗಿ ಸ್ವಾತಂತ್ರ ಚಳುವಳಿಗೆ ಇಳಿದಿರದಿದ್ದರೂ ಅವರಲ್ಲಿ ದೇಶಾಭಿಮಾನ,

ಭಾಷಾಭಿಮಾನ, ವಸಾಹತು ಅಧಿಪತಿ ಇಂಗ್ಲೆಂಡಿನ ವಿರುದ್ಧವಾದ ಸಾತ್ವಿಕ ಕೋಪ ತುಂಬಿ ತುಳುಕುತ್ತಿದ್ದವು. ಇಂಗ್ಲೆಂಡಿನ ಬಗ್ಗೆ ಅಂದಿನ ಸುಸಂಸ್ಕೃತ ಭಾರತೀಯನೊಬ್ಬ ಯಾವ ಭಾವವನ್ನು ತಳೆಯಬಹುದಾಗಿತ್ತೋ ಅದನ್ನು ಗೋಕಾಕರು ತಳೆದಿದ್ದರು. ಎಂದರೆ ಮೆಚ್ಚುಗೆ ಮತ್ತು ಜಿಗುಪ್ಸೆ ಎಂಬ ಪರಸ್ಪರ ವಿರುದ್ಧವಾದ ಮಿಶ್ರಭಾವವನ್ನು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ವಿದ್ಯಾರ್ಥಿಯಾಗಿ (ಹಾಗೂ ಅಧ್ಯಾಪಕನಾಗಿ) ಅವರು ತಮ್ಮೀ ಇಂಗ್ಲೆಂಡ್ ಯಾತ್ರೆಯ ಸಾಹಸದ ಬಗ್ಗೆ ತುಂಬಾ ಉತ್ಸುಕರಾಗಿದ್ದರು ಇಂಗ್ಲೆಂಡಿಗೆ ಬಂದಿಳಿದು ಆ ದೇಶದ ಸೌಂದರ್ಯ, ಶುಚಿ, ಶಿಸ್ತು, ಆರ್ಥಿಕ ಪ್ರಗತಿ ಹಾಗೂ ಇಂಗ್ಲಿಷರಿಗೆ ಸ್ವಂತ ಇತಿಹಾಸ ಮತ್ತು ಸಂಸ್ಕೃತಿಯ ಕುರಿತಾಗಿ ಇರುವ ಅಭಿಮಾನ ಮುಂತಾದ ಸಂಗತಿಗಳನ್ನು ಅವರು ಮೆಚ್ಚಿಕೊಂಡಿದ್ದರು ಕೂಡ. ಆದರೆ ಇದೇ ಇಂಗ್ಲಿಷ್ ಮಂದಿ ಭಾರತವನ್ನು ವಸಾಹತು ಮಾಡಿಕೊಂಡು ದೇಶೀಯರನ್ನು ಅತ್ಯಂತ ತುಚ್ಛವಾಗಿ ನೋಡಿಕೊಳ್ಳುತ್ತಿದ್ದಾರೆ ಎನ್ನುವ ಸುಪ್ತ ಕ್ರೋಧವೂ ಅವರ ಮನಸ್ಸಿನಲ್ಲಿ ಇತ್ತು. ಯಾವಾಗ ಭಾರತವು ಸ್ವಾತಂತ್ರ್ಯ ಗಳಿಸಿ ತನ್ನ ಸಂಸ್ಕೃತಿಯ ನಿಜವಾದ ಹಿರಿಮೆಯನ್ನು ಮತ್ತು ಭಾರತೀಯರ ಪ್ರತಿಭೆಯ ಸಾಧ್ಯತೆಯನ್ನು ಜಗತ್ತಿಗೆ ತೋರುವುದೋ ಎಂಬುದೇ ಗೋಕಾಕರ ತಳಮಳವಾಗಿತ್ತು. "ಸಮುದ್ರ ಗೀತಗಳ"ನ್ನು ಇಡಿಯಾಗಿ ನೋಡಿದರೆ ನಮಗೆ ಕಾಣಿಸುವುದು ಇಂಥ ಮಿಶ್ರಭಾವಗಳ ಹಸಿಹಸಿಯಾದ, ಆದರೆ ಅಷ್ಟೇ ಪ್ರಾಮಾಣಿಕವಾದ ಅಭಿವ್ಯಕ್ತಿ.

**129.** ಈ ಲೇಖನ ಭಾಗವು ಯಾವ ವಿಷಯವನ್ನು ಕುರಿತು ಹೇಳುತ್ತದೆ ?

(1) ಸಮುದ್ರ ಗೀತವು ಕನ್ನಡದ್ದು

(2) ಸಮುದ್ರ ಗೀತಗಳ ರಚನೆಯ ಸಂದರ್ಭವನ್ನು

(3) ಸಮುದ್ರ ಗೀತಗಳ ನೋಟವನ್ನು

(4) ಸಮುದ್ರ ಗೀತಗಳ ಪದಗಳನ್ನು

**130.** 'ಸಮುದ್ರ ಗೀತೆಗಳು' ಕವನದ ಸಂಕಲನದಲ್ಲಿ ಇರುವುದು

(1) ಹೊಸ ಕಾಲದ ಆಗಮನ

(2) ನವ್ಯ ಕಾವ್ಯದ ಗುರುತುಗಳು

(3) ಹೊಸ ಕನ್ನಡದ ಚಿಗುರುಗಳು

(4) ಕವನಗಳಲ್ಲಿನ ವಸ್ತು

**131.** ಗೋಕಾಕರು :

(1) ಇಂಗ್ಲಿಷ್ ಅಧ್ಯಾಪಕರು

(2) ಕನ್ನಡ ಅಧ್ಯಾಪಕರು ಮತ್ತು ಸಾಹಿತಿಗಳು

(3) ಇಂಗ್ಲಿಷ್ ಅಧ್ಯಾಪಕರು ಮತ್ತು ಸಾಹಿತಿಗಳು

(4) ಕನ್ನಡದ ಅಧ್ಯಾಪಕರು

**132.** ಈ 'ಕವನ ಸಂಕಲನ ಗೋಕಾಕರ ಸಮುದ್ರಯಾನದ ಅನುಭವವನ್ನು ಒಳಗೊಂಡಿದೆ' ಈ ವಾಕ್ಯದಲ್ಲಿನ ಕ್ರಿಯಾಪದ

(1) ಕವನ ಸಂಕಲನ

(2) ಒಳಗೊಂಡಿದೆ

(3) ಸಮುದ್ರಯಾನ

(4) ಅನುಭವವನ್ನು

**133.** 'ಸಮುದ್ರಗೀತಗಳು' ಪ್ರಕಟಗೊಂಡ ಕಾಲ

(1) 1940

(2) 1956

(3) 1934

(4) 1938

**134.** 'ಸುಸಂಸ್ಕೃತ ಭಾರತೀಯ' ಈ ಪದಗುಚ್ಛದಲ್ಲಿ 'ಸುಸಂಸ್ಕೃತ' ಎನ್ನುವುದು :

(1) ನಾಮಪದ

(2) ಗುಣ ವಿಶೇಷಣ

(3) ಕರ್ತೃ ಪದ

(4) ಕ್ರಿಯಾ ವಿಶೇಷಣ

**135.** ಗೋಕಾಕರು ಇಂಗ್ಲೆಂಡ್ ತಲುಪಿದಾಗ ಆ ದೇಶದ ಬಗ್ಗೆ ಅವರಲ್ಲಿದ್ದದ್ದು :

(1) ತಿರಸ್ಕಾರ

(2) ಆವೇಶ

(3) ಮೆಚ್ಚುಗೆ ಮತ್ತು ಜಿಗುಪ್ಸೆ

(4) ಮೆಚ್ಚುಗೆ

***ನಿರ್ದೇಶನಗಳು :*** *ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆರಿಸಿ ಉತ್ತರಿಸಿ (136 ರಿಂದ 150 ರವರೆಗೆ).*

**136.** ಯಾವ ಸಂಧರ್ಭದಲ್ಲಿ ಪದಗಳು ಬಳಕೆಯಾಗಿವೆಯೋ ಆ ಸಂಧರ್ಭಗಳಿಂದ ಪದಗಳ ಅರ್ಥವನ್ನು ತಿಳಿಯುವುದಕ್ಕೆ ಒತ್ತುಕೊಡುವ ಓದನ್ನು ಕಲಿಯುವ ವಿಧಾನವೆಂದರೆ

(1) ಬಾಟಮ್ ಅಪ್ ಅಪ್ರೋಚ್ (Bottom-up approach)

(2) ಸಮಗ್ರ ಭಾಷಾ ವಿಧಾನ (Whole language approach)

(3) ರಾಚನಿಕ ವಿಧಾನ (Structural approach)

(4) ಸಂವಹನ ವಿಧಾನ (Communicative approach)

**137.** ಭಾಷೆಯ ಬಗ್ಗೆ ಯೋಚಿಸಿ ಮಾತನಾಡುವ ಸಾಮರ್ಥ್ಯವು

(1) ಸಮರ್ಥನಾದ ಮಾತುಗಾರ

(2) ಪ್ರಾರಂಭಿಕ ಅಕ್ಷರ ಜ್ಞಾನ

(3) ಆದಿಭಾಷಾ ಜ್ಞಾನದ ಸಾಮರ್ಥ್ಯ (metalinguistic ability)

(4) ಧ್ವನಿ ಶಾಸ್ತ್ರದ (phonological) ಅರಿವು

**138.** ತಾಯಿಯೊಬ್ಬಳು ತನ್ನ ಮಗು ತಾನೆಂದೂ ಕೇಳಿರದ ವಯಸ್ಕರು ಮತ್ತು ಸಹೋದರರು ಮಾತನಾಡುವಂತಹ ಮಾತುಗಳನ್ನು ಆಡುವುದು ನನ್ನ ಗಮನಕ್ಕೆ ಬಂದಿದೆಯೆಂದು IIನೇ ತರಗತಿಯ ಶಿಕ್ಷಕರನ್ನು ಕೇಳುತ್ತಾಳೆ. ಇದು ಹೇಗೆ ಸಾಧ್ಯ ?

ಈ ಪ್ರಶ್ನೆಗೆ ಕೆಳಕಂಡ ಉತ್ತರಗಳಲ್ಲಿ ಸರಿಯಾದ ಉತ್ತರ ಯಾವುದು ?

(1) ಭಾಷೆಯನ್ನು ಕಲಿಯಲು ಮನುಷ್ಯನ ಮೆದುಳು ಅಂತರ್ನಿಹಿತವಾಗಿಯೇ ರೂಪುಗೊಂಡಿರುತ್ತದೆ

(2) ಮಗುವಿನ ಭಾಷೆಯ ಬೆಳವಣಿಗೆಯನ್ನು ಬಲಪಡಿಸಿದಾಗ (Reinforce) ಮಗು ಭಾಷೆಯನ್ನು ಕಲಿಯುತ್ತದೆ

(3) ರಚನಾತ್ಮಕ ವಿಧಾನದ ಮೂಲಕ ಮಕ್ಕಳು ಹೊಸ ಭಾಷೆಯನ್ನು ಕಂಡುಕೊಳ್ಳಬಹುದು

(4) ಮಗು ವಯಸ್ಕರನ್ನು ಅನುಕರಣೆ ಮಾಡುವ ಮೂಲಕ ಮಾತ್ರ ಭಾಷೆಯನ್ನು ಕಲಿಯುತ್ತದೆ

**139.** ಒಬ್ಬ ವಯಸ್ಕ ಮತ್ತು ಒಂದು ಮಗು ಒಟ್ಟಿಗೆ ಪುಸ್ತಕವನ್ನು ನೋಡುತ್ತಾರೆ. ವಯಸ್ಕ ವ್ಯಕ್ತಿಯು ಮಗುವಿಗೆ ಪ್ರಶ್ನೆಗಳನ್ನು ಕೇಳಿ ಸಂಭಾಷಣೆ ಮಾಡಲು ಪ್ರೋತ್ಸಾಹಿಸುತ್ತಾನೆ. ಆನಂತರ ಅವರು ತಮ್ಮ ಪಾತ್ರವನ್ನು ಆದಲು ಬದಲು ಮಾಡಿಕೊಂಡು ಮಗು ವಯಸ್ಕ ವ್ಯಕ್ತಿಯನ್ನು ಪ್ರಶ್ನೆ ಕೇಳುತ್ತದೆ. ಹೀಗೆ ಆರಂಭಿಕ ಅಕ್ಷರ ಜ್ಞಾನವನ್ನು ಕಲಿಯಲು ಸುಗಮಗೊಳಿಸಲು ಬಳಸುವ ತಂತ್ರವೆಂದರೆ -

(1) ಸಾಮೂಹಿಕ ಓದುವಿಕೆ

(2) ಸಂವಾದ ರೂಪದ ಓದುವಿಕೆ

(3) ಕತೆ ಹೇಳುವುದು

(4) ಮಾದರಿ ಓದುವಿಕೆ

**140.** ಶಿಕ್ಷಕನು ಕೆಳಕಂಡ ವಿಧಾನದ ಮೂಲಕ ಭಾಷೆಯನ್ನು ಕಲಿಯುವವರ ಆಲಿಸುವ ಕೌಶಲ್ಯವನ್ನು ಉತ್ತಮಪಡಿಸಬಹುದು.

(1) ಇತರ ಭಾಷಾ ಕೌಶಲ್ಯತೆಗಳೊಂದಿಗೆ ಅವರಿಗೆ ಸಂಪರ್ಕ ಕಲ್ಪಿಸದೆ ಆಲಿಸುವ ಕೌಶಲ್ಯದ ಮೇಲೆ ಮಾತ್ರ ಗಮನ ಕೇಂದ್ರೀಕರಿಸುವುದು

(2) ಹಲವಾರು ಮೂಲ ಮತ್ತು ಬೇರೆ ಬೇರೆ ಜನರ ಮಾತುಗಳನ್ನು ಆಲಿಸಲು ಕಲಿಯುವವರಿಗೆ ಅವಕಾಶ ಕಲ್ಪಿಸಿ ಅವರನ್ನು ಆಲಿಸುವ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸುವುದು

(3) ನಿಷ್ಕ್ರಿಯಾತ್ಮಕವಾಗಿ ಅವರು ಕೇಳುವ ಪ್ರತಿಯೊಂದು ಮಾತನ್ನು ಕಲಿಯುವವರು ಆಲಿಸಿವಂತೆ ಮಾಡುವುದು

(4) ತರಗತಿಯ ಒಳಗೆ ಮತ್ತು ಹೊರಗೆ ಎರಡೂ ಕಡೆ ಕಲಿಯುವವರೊಂದಿಗೆ ನಿರಂತರವಾಗಿ ಮಾತನಾಡುವುದು

**141.** *ಪ್ರತಿಪಾದನೆ (ಎ) :*

ಪ್ರಾಥಮಿಕ ಹಂತದಲ್ಲಿ ಭಾಷೆಯ ಖಚಿತತೆ ತುಂಬಾ ಮುಖ್ಯ ?

*ಕಾರಣ (ಆರ್) :*

ವ್ಯಾಕರಣ ಪ್ರಾಥಮಿಕ ಪಠ್ಯ ಕ್ರಮದ ಅವಿಭಾಜ್ಯ ಅಂಗವಾಗಿದೆ.

ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆಗಳನ್ನು ಆರಿಸಿ :

(1) (ಎ) ಮತ್ತು (ಆರ್) : ಎರಡು ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ ಅಲ್ಲ

(2) (ಎ) ಸರಿ ಆದರೆ (ಆರ್) ತಪ್ಪು

(3) (ಎ) ತಪ್ಪು ಆದರೆ (ಆರ್) ಸರಿ

(4) (ಎ) ಮತ್ತು (ಆರ್) : ಎರಡೂ ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ

**142.** ಭಾಷೆಯ ಸ್ವರೂಪ ಮತ್ತು ಭಾಷೆಯ ಕಲಿಕೆಯ ಸ್ವರೂಪದ ಬಗ್ಗೆ ಸೈದ್ಧಾಂತಿಕ ನಿಲುವುಗಳು ಮತ್ತು ನಂಬಿಕೆಗಳು ಹಾಗು ಶೈಕ್ಷಣಿಕ ವ್ಯವಸ್ಥೆಗೆ ಅವೆರಡನ್ನೂ ಅನ್ವಯಿಸುವ ವಿಧಾನವು

(1) ಅಡಕ ವಿಷಯ (Content)

(2) ಪ್ರಸ್ತಾವನೆ (Approach)

(3) ತಂತ್ರ (Technique)

(4) ಪಠ್ಯ ಕ್ರಮ ವಿವರಣೆ (Syllabus)

**143.** ರಚನಾತ್ಮಕ (Formative) ಮೌಲ್ಯಮಾಪನ ಎಂದರೆ

(1) ಸಧ್ಯ ಚಾಲ್ತಿಯಲ್ಲಿರುವ ಬೆಳವಣಿಗೆಗಳು ಮತ್ತು ಸುಧಾರಣೆಗಳಿಗೆ ಸಂಬಂಧಿಸಿರುತ್ತದೆ

(2) ಪಠ್ಯಕ್ರಮದಲ್ಲಿ (course) ಪೂರ್ವ ನಿರ್ಧಾರಿತ ಅಥವಾ ನಿರ್ಧಿಷ್ಟ ಹಂತದಲ್ಲಿ ನಿರ್ವಹಿಸುವುದು

(3) ಬದಲಾವಣೆಗೆ ಒಳಪಟ್ಟಿರುವುದಿಲ್ಲ

(4) ಬೋಧನೆ - ಕಲಿಕೆ ಪ್ರಕ್ರಿಯೆಯಲ್ಲಿ ಏನು ನಡೆಯುತ್ತಿದೆಯೋ ಅದು

**144.** ಸಣ್ಣ ವಿದ್ಯಾರ್ಥಿಗಳಿಗೆ ಪಾಠಗಳನ್ನು ಯೋಜಿಸುವಾಗ , ಶಿಕ್ಷಕರು ಒಟ್ಟು ಭೌತಿಕ ಪ್ರತಿ ಸ್ಪಂದನಾ (Total Physical Response) ವಿಧಾನದ ಮೇಲೆ ಗಮನ ಹರಿಸಲು ನಿರ್ಧರಿಸಿದರು. ಪಾಠದಲ್ಲಿ ಒಟ್ಟು ಭೌತಿಕ ಪ್ರತಿಸ್ಪಂದನಾ ವಿಧಾನವನ್ನು ಸೇರಿಸಲು ಶಿಕ್ಷಕರು ಈ ಮುಂದಿನ ಯಾವ ಒಂದು ವಿಧಾನವನ್ನು ಬಳಸಬೇಕು ?

(1) ಅವರು ತಮ್ಮ ಜಾಗಗಳಲ್ಲಿಯೇ ಕುಳಿತುಕೊಳ್ಳುವಂತೆ ಮಾಡುವ ಮತ್ತು ಅವರು ಜೊತೆ ಜೊತೆಯಾಗಿ ಅಥವಾ ಗುಂಪುಗಳಲ್ಲಿ ಕೆಲಸ ಮಾಡುವಂತಹ ಚಟುವಟಿಕೆಗಳನ್ನು ಇಡಬೇಕು.

(2) ತರಗತಿಯಲ್ಲಿ ಕೆಲವು ಆಲಿಸುವ ಚಟುವಟಿಕೆಗಳನ್ನು ಇಡಬೇಕು.

(3) ಚಟುವಟಿಕೆಗಳನ್ನೆಲ್ಲಾ ಪಕ್ಕಕ್ಕಿಟ್ಟು ಅವರಿಗೆ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಅವರು ಸ್ಪಂದಿಸುವಂತೆ ಉತ್ತೇಜನ ನೀಡಬೇಕು.

(4) ತರಗತಿಯಲ್ಲಿ ಕೆಲವು ದೈಹಿಕ ಚಟುವಟಿಕೆಗಳನ್ನು ಸೇರಿಸುವಂತೆ ನೋಡಿಕೊಳ್ಳಬೇಕು.

**145.** ವ್ಯಾಕರಣವನ್ನು ಕಲಿಸುವ ಯಾವ ವಿಧಾನವು ಭಾಷೆಯನ್ನು ಕಲಿಯುವುದೆಂದರೆ, ನಿಯಮಗಳನ್ನು ಕಲಿಯುವ ವಿಷಯ ಎಂಬ ನಂಬಿಕೆಯನ್ನು ಮೂಡಿಸುತ್ತದೆ.

(1) ನಿದರ್ಶನಗಳನ್ನು ಕೊಡುವುದು (Inductive)

(2) ಸಂವಹನಾತ್ಮಕತೆ (Communicative)

(3) ವ್ಯಾಕರಣ ಅನುವಾದ

(4) ತಾರ್ಕಿಕ ಊಹೆ (Deductive)

146. ಶಿಕ್ಷಕರು ಐದನೇ ತರಗತಿಯಲ್ಲಿ ಕಲಿಯುವವರಿಗೆ ಯುಕ್ತ ಬರವಣಿಗೆ ಕೆಲಸವೊಂದನ್ನು ನೀಡುವುದಕ್ಕೆ ಯೋಚಿಸುತ್ತಿದ್ದಾರೆ. ಶಿಕ್ಷಕರು ಈ ಮುಂದಿನ ಯಾವ ಅಂಶದ ಮೇಲೆ ಹೆಚ್ಚು ಗಮನ ನೀಡಬೇಕು.

(1) ವಿಷಯದ ನಿರರ್ಗಳತೆ (Fluency of the content)
(2) ನಿರರ್ಗಳತೆ ಮತ್ತು ಖಚಿತತೆಗಳೆರಡಕ್ಕೂ ಗಮನ ನೀಡುವುದು
(3) ಕಲಿಕೆದಾರನ ಕೈಬರಹ.
(4) ವಿಷಯದ ಕರಾರುವಾಕ್ಕುತನ (Accuracy of the content)

147. 'ಟಾಪ್‌ಡೌನ್' ಎಂದರೆ, ಒಟ್ಟಾರೆ ಆರ್ಥದ ಕತೆಗೆ ಗಮನ ನೀಡುವುದು 'ಬಾಟಮ್ ಅಪ್' ಎಂದರೆ,

(1) ಮೊದಲೇ ಓದುವುದರ(pre-reading) ಮೇಲೆ ಗಮನ ಹರಿಸುವುದು.
(2) ಪದಗಳು ಮತ್ತು ಪದಪುಂಜಗಳ ಮೇಲೆ ಗಮನ ನೀಡುವುದು.
(3) ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಉತ್ತರಗಳನ್ನು ಕೇಳುವುದರ ಮೇಲೆ ಗಮನ ನೀಡುವುದು.
(4) ಪಠ್ಯದ ಸಾರಾಂಶ ಮತ್ತು ಅಮೂರ್ತ ವಿಷಯಗಳ ಮೇಲೆ ಗಮನ ಹರಿಸುವುದು.

148. ಈ ಕೆಳಕಂಡ ಅಂಶಗಳಲ್ಲಿ ಭಾಷಾ ಶಿಕ್ಷಕರ ಪ್ರಾಥಮಿಕ ಜವಾಬ್ಧಾರಿಗಳೇನು?

(1) ಬೋಧನೆಗೆ ಸೂಕ್ತ ವಿಷಯವನ್ನು ಆಯ್ಕೆ ಮಾಡುವುದು.
(2) ಕಲಿಯುವವರನ್ನು ಬೇರೆ ಬೇರೆ ವರ್ಗಗಳಾಗಿ ಗುಂಪುಮಾಡುವುದು.
(3) ಕಲಿಯುವವರಿಗೆ ಶಿಕ್ಷಣ ನೀಡುವುದು.
(4) ಕಲಿಯುವವನ ಸಂವಹನಕ್ಕೆ ಏನು ಬೇಕು ಎಂಬುದನ್ನು ಗುರುತಿಸುವುದು.

149. ಚಿಕ್ಕಮಗು ಒಂದು ಪುಸ್ತಕವನ್ನು ತೆಗೆದುಕೊಂಡು, ಬಲಭಾಗದಲ್ಲಿ ಹಿಡಿದುಕೊಂಡು, ಪುಟಗಳನ್ನು ತಿರುಗಿಸುತ್ತದೆ . ಈ ಎಲ್ಲ ಸಂಗತಿಗಳು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತದೆ.

(1) ಪ್ರಾರಂಭಿಕ ಪಠ್ಯ ತಿಳಿವಳಿಕೆ
(2) ಪ್ರಾರಂಭಿಕ ಗುಣ ಲಕ್ಷಣಗಳು
(3) ಪ್ರಾರಂಭಿಕ ಸಮಸ್ಯೆಗಳನ್ನು ಬಗೆಹರಿಸುವ ಕೌಶಲ್ಯ
(4) ಪ್ರಾರಂಭಿಕ (emergent) ಅಕ್ಷರ ಕೌಶಲ್ಯಗಳು

150. *ಪ್ರತಿಪಾಧನೆ (ಎ) :*

ಕಲಿಯುವವರು ಭಾಷಾರ್ಜನೆಗೆ ವಂಶವಾಹಿಯಾಗಿ ಮೊದಲೇ ಸಿದ್ಧರಿರುವುದರಿಂದ ಅವರಿಗೆ ಭಾಷೆ ಪ್ರಾಪ್ತ ವಾಗುತ್ತದೆ. ಮತ್ತು ಇದರಲ್ಲಿ ಪರಿಸರದ ಪಾತ್ರ ವಿರುವುದಿಲ್ಲ.

*ಕಾರಣ (ಆರ್) :*

ಕಲಿಯುವವರನ್ನು ಕೇಂದ್ರೀಕರಿಸಿಕೊಂಡ ತರಗತಿಯ ವಾತಾವರಣವು ಭಾಷಾರ್ಜನೆಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆಗಳನ್ನು ಆರಿಸಿ :

(1) (ಎ) ಮತ್ತು (ಆರ್) : ಎರಡು ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ ಅಲ್ಲ
(2) (ಎ) ಸರಿ ಆದರೆ (ಆರ್) ತಪ್ಪು
(3) (ಎ) ತಪ್ಪು ಆದರೆ (ಆರ್) ಸರಿ
(4) (ಎ) ಮತ್ತು (ಆರ್) : ಎರಡೂ ಸರಿ. ಮತ್ತು (ಆರ್) ಇದು (ಎ) ಯ ಸರಿಯಾದ ವಿವರಣೆ

# SPACE FOR ROUGH WORK

# SPACE FOR ROUGH WORK

***ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :***

1. ವಿಭಿನ್ನ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಪರೀಕ್ಷಾ ಕಿರುಪುಸ್ತಕದಲ್ಲಿ ವಿವರಿಸಲಾಗಿದೆ, ಅದನ್ನು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀವು ಎಚ್ಚರಿಕೆಯಿಂದ ಓದಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. OMR ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕೋಡ್ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. ಯಂತ್ರವು ಒ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೋಡೆಡ್ ಮಾಹಿತಿಯನ್ನು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಯನ್ನು ಅಪೂರ್ಣವಾಗಿ ಬಿಡಬಾರದು ಮತ್ತು ಅದು ಅಡ್ಮಿಟ್ ಕಾರ್ಡ್‌ನಲ್ಲಿ ನೀಡಿರುವ ಮಾಹಿತಿಗಿಂತ ಭಿನ್ನವಾಗಿರಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಪತ್ರ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಮೊಬೈಲ್ ಫೋನ್‌ಗಳು, ವೈರ್‌ಲೆಸ್ ಸಂವಹನ ಸಾಧನಗಳು (ಸ್ವಿಚ್ ಆಫ್ ಮೋಡ್‌ನಲ್ಲಿಯೂ ಪಹ) ಮತ್ತು ಇತರ ನಿಷೇಧಿತ ವಸ್ತುಗಳನ್ನು ಪರೀಕ್ಷಾ ಸಭಾಂಗಣಗಳಲ್ಲಿ / ಕೊಠಡಿಗಳಲ್ಲಿ ತರಬಾರದು. ಈ ಸೂಚನೆಯನ್ನು ಅನುಸರಿಸಲು ವಿಫಲವಾದರೆ ಪರೀಕ್ಷೆಯಲ್ಲಿ ಅನ್ಯಾಯದ ವಿಧಾನಗಳನ್ನು ಬಳಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಪರೀಕ್ಷೆಯ ರದ್ದತಿ ಸೇರಿದಂತೆ ಅಭ್ಯರ್ಥಿಯ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಪತ್ರವನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಕೇಂದ್ರ ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡುಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಕಕ್ಷ/ಹಾಲ್‌ನಿಂದ ಹೊರಗೆ ಹೋಗಬಾರದು. **ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.**
12. ಇಲೆಕ್ಟ್ರಾನಿಕ/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಕಕ್ಷ/ಹಾಲ್‌ನಲ್ಲಿ, ಪರೀಕ್ಷಾರ್ಥಿ ಸಂಸ್ಥಾನದ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಪರೀಕ್ಷಾ ಸಂಸ್ಥಾನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. *ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.***

**READ THE FOLLOWING INSTRUCTIONS CAREFULLY :**

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue/Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the Examination Hall/Room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, will be considered as using unfair means in the examination and action will be taken against the candidate including cancellation of examination.
9. Each candidate must show on demand his / her Admit Card to the Invigilator.
10. No candidate, without special permission of the Centre Superintendent or Invigilator, should leave his / her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left-hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Room/Hall.** ***The candidates are allowed to take away this Test Booklet with them.***

**निम्नलिखित निर्देशों को ध्यान से पढ़ें :**

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें ।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें । एक बार उत्तर अंकित करने के बाद उसे बदला नहीं जा सकता है ।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर पत्र में निर्धारित स्थान के अतिरिक्त अन्यत्र न लिखें ।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
5. परीक्षा पुस्तिका/उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें ।
6. OMR उत्तर पत्र में कोडित जानकारी को एक मशीन पढ़ेगी । इसलिए कोई भी सूचना अधूरी न छोड़ें और यह प्रवेश पत्र में दी गई सूचना से भिन्न नहीं होनी चाहिए ।
7. परीक्षार्थी द्वारा परीक्षा हॉल/कक्ष में प्रवेश पत्र के सिवाय किसी प्रकार की पाठ्य सामग्री, मुद्रित या हस्तलिखित, काग़ज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए । इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी के विरुद्ध कार्यवाही की जाएगी, परीक्षा रद्द करने सहित ।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
11. कार्यरत निरीक्षक को अपना उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे । यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा । **परीक्षार्थी अपने बाएँ हाथ के अँगूठे का निशान उपस्थिति-पत्र में दिए गए स्थान पर अवश्य लगाएँ ।**
12. इलेक्ट्रॉनिक/हस्तचालित परिकलक का उपयोग वर्जित है ।
13. परीक्षा-हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं । अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा ।
14. किसी भी परिस्थिति में परीक्षा पुस्तिका और उत्तर पत्र का कोई भाग अलग न करें ।
15. **परीक्षा सम्पन्न होने पर, परीक्षार्थी कक्ष/हॉल छोड़ने से पूर्व उत्तर पत्र निरीक्षक को अवश्य सौंप दें ।** ***परीक्षार्थी अपने साथ इस परीक्षा पुस्तिका को ले जा सकते हैं ।***